ಗ್ರಾಮೀಣ ರಸ್ತೆಗಳ ಅಭಿವೃದ್ಧಿ

2493(3353); ಶ್ರೀ ಕಾಶಪ್ಪನವರ್ ವಿಜಯಾನಂದ್ ಶಿವಶಂಕರಪ್ಪ (ಹುನಗುಂದ)

ಅ) ರಾಜ್ಯದಲ್ಲಿ ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಮತ್ತು ಸುಧಾರಣೆಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು;

ಆ) ಇವುಗಳ ಅಭಿವೃದ್ಧಿಗಾಗಿ ಜಿಲ್ಲಾವಾರು ನೀಡಿದ ಅನುದಾನವೆಷ್ಟು?

ಇ) ಹುನಗುಂದ ಮತಕ್ಷೇತ್ರದ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ವಿಶೇಷ ಅನುದಾನ ಬಿಡುಗಡೆ ಮಾಡಲಾಗುವುದೇ; ಹಾಗಿದ್ದಲ್ಲಿ ಬಿಡುಗಡೆ ಮಾಡಲಾಗುವ ಅನುದಾನವೆಷ್ಟು? (ವಿವರ ಒದಗಿಸುವುದು)?

ಶ್ರೀ ಎಚ್.ಕೆ. ಪಾಟೀಲ್ (ಗ್ರಾ. ಪಂ. ರಾಜ್ ಇಲಾಖೆ)

ಅ) ಪ್ರತಿ ವರ್ಷ ಗ್ರಾಮೀಣ ರಸ್ತೆಗಳ ದುರಸ್ತಿ/ನಿರ್ವಹಣೆ ಹಾಗೂ ಅಭಿವೃದ್ಧಿಗಾಗಿ ವಿವಿಧ ಲೆಕ್ಕಶೀರ್ಷಿಕೆ/ಕಾರ್ಯಕ್ರಮದಡಿ ಜಿಲ್ಲಾ ಪಂಚಾಯತಿಗಳಿಗೆ ಅನುದಾನವನ್ನು ಒದಗಿಸಲಾಗುತ್ತಿದೆ.

ಅದರಂತೆ ಜಿಲ್ಲಾ ಪಂಚಾಯತಿಗಳಿಗೆ ಲಭ್ಯವಾಗುವ ಅನುದಾನಕ್ಕೆ ಅನುಗುಣವಾಗಿ ಜಿ.ಪಂ.ಗಳಲ್ಲಿ ಕ್ರಿಯಾ ಯೋಜನೆ ರೂಪಿಸಿ ರಸ್ತೆ ನಿರ್ವಹಣೆ/ಅಭಿವೃದ್ಧಿಯ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುವುದು.

ರಾಜ್ಯದಲ್ಲಿನ ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಮತ್ತು ಸುಧಾರಣೆ ಕುರಿತಂತೆ ಪ್ರಸ್ತುತ ರಸ್ತೆಗಳ ನಿರ್ವಹಣೆ ಮತ್ತು ಅಭಿವೃದ್ಧಿಯ ಕಾರ್ಯಕ್ರಮಗಳು ಕೆಳಕಂಡಂತಿವೆ.

ರಸ್ತೆ ದುರಸ್ತಿ/ನಿರ್ವಹಣೆ ಕಾರ್ಯಕ್ರಮ:

1. ಮುಖ್ಯ ಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ ಲೆಕ್ಕಶೀರ್ಷಿಕೆ–3054

2. ಯೋಜನೇತರ ಲೆಕ್ಕಶೀರ್ಷಿಕೆ–3054 (ನಿರ್ವಹಣೆ) (ಟಾಸ್ಕ್‌ಫೋರ್ಸ್)
3. ಹಣಕಾಸು ಆಯೋಗ ಶಿಫಾರಸ್ಸು ಯೋಜನೆ

ರಸ್ತೆ ಅಭಿವೃದ್ಧಿ ಕಾರ್ಯಕ್ರಮ:

1. ನಬಾರ್ಡ್ ಸಾಲ ಸೌಲಭ್ಯ ಯೋಜನೆ
2. ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ
3. ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ

ಮೇಲ್ಕಂಡ ವಿವಿಧ ರಸ್ತೆ ದುರಸ್ತಿ/ನಿರ್ವಹಣೆ/ಅಭಿವೃದ್ಧಿ ಕಾರ್ಯಕ್ರಮವನ್ನು ಜಿ.ಪಂ. ವತಿಯಿಂದ ಹಾಗೂ ಪಿಎಂಜಿಎಸ್‌ವೈ ಮತ್ತು ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಕಾಮಗಾರಿಗಳನ್ನು ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿದೆ.

ಆ) ಪ್ರಸ್ತುತ 2015–16ನೇ ಸಾಲಿನಲ್ಲಿ ಸಿಎಂಜಿಎಸ್‌ವೈ ಲೆಕ್ಕಶೀರ್ಷಿಕೆ–3054 ಮತ್ತು ಯೋಜನೇತರ ಲೆಕ್ಕಶೀರ್ಷಿಕೆ–3054ರಡಿ ಒದಗಿಸಿದ ಜಿಲ್ಲಾವಾರು ಅನುದಾನದ ವಿವರ ಅನುಬಂಧದಲ್ಲಿ ನೀಡಿದೆ.

ಇದರೊಂದಿಗೆ ನಬಾರ್ಡ್ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಆಯವ್ಯಯದಲ್ಲಿ ರೂ. 210.00 ಕೋಟಿ, ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಕಾಮಗಾರಿಗಳಿಗೆ ರೂ. 1335.50 ಕೋಟಿ ಹಾಗೂ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯ ಕಾಮಗಾರಿಗಳಿಗೆ ರೂ. 466.67 ಕೋಟಿಗಳನ್ನು ಒದಗಿಸಲಾಗಿರುತ್ತದೆ.

ಇ) ಇಂತಹ ವಿಶೇಷ ಅನುದಾನದ ಪ್ರಸ್ತಾವನೆಗಳಿರುವುದಿಲ್ಲ.

ಅನುಬಂಧ

2015–16ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ಯೋಜನೆ ಮತ್ತು ಯೋಜನೇತರ ಲೆ.ಶೀ–3054ರಡಿ ಹಂಚಿಕೆಯಾದ ಅನುದಾನ ವಿವರ

(ರೂ. ಲಕ್ಷಗಳಲ್ಲಿ)

ಕ್ರ. ಸಂ	ಜಿಲ್ಲೆ	2015–16	
		ಯೋಜನೇತರ ಲೆ.ಶೀ– 3054 (ಟಾಸ್ಕ್‌ಫೋರ್ಸ್)	ಯೋಜನೆ ಲೆ.ಶೀ– 3054
1	ಬಾಗಲಕೋಟೆ	449.00	341.00
2	ಬೆಂಗಳೂರು (ಗ್ರಾ)	270.13	168.00
3	ಬೆಂಗಳೂರು (ನ)	196.10	160.00
4	ಬೆಳಗಾಂ	835.56	562.00
5	ಬಳ್ಳಾರಿ	448.80	297.00
6	ಬೀದರ್	329.30	225.00
7	ಬಿಜಾಪುರ	610.15	561.00
8	ಚಾಮರಾಜ ನಗರ	237.30	182.00
9	ಚಿಕ್ಕಬಳ್ಳಾಪುರ	316.70	225.00
10	ಚಿಕ್ಕಮಗಳೂರು	406.08	406.00
11	ಚಿತ್ರದುರ್ಗ	495.76	457.00
12	ದಕ್ಷಿಣ ಕನ್ನಡ	607.76	497.00
13	ದಾವಣಗೆರೆ	365.62	380.00
14	ಧಾರವಾಡ	256.46	237.00
15	ಗದಗ	255.38	224.00
16	ಗುಲ್ಬರ್ಗಾ	537.49	651.00
17	ಹಾಸನ	579.18	330.00
18	ಹಾವೇರಿ	360.57	375.00
19	ಕೊಡಗು	367.60	281.00
20	ಕೋಲಾರ	324.54	219.00

21	ಕೊಪ್ಪಳ	284.29	178.00
22	ಮಂಡ್ಯ	577.61	525.00
23	ಮೈಸೂರು	411.74	320.00
24	ರಾಮನಗರ	203.54	174.00
25	ರಾಯಚೂರು	392.56	272.00
26	ಶಿವಮೊಗ್ಗ	606.63	454.00
27	ತುಮಕೂರು	859.03	613.00
28	ಉಡುಪಿ	508.59	524.00
29	ಉತ್ತರ ಕನ್ನಡ	722.61	528.00
30	ಯಾದಗೀರ್	222.65	200.00
ಒಟ್ಟು		**13038.73**	**10566.00**

ಹಣ ಬಿಡುಗಡೆ ಮಾಡಿದ ಮಾಹಿತಿ

2495(1033); ಶ್ರೀ ಕೃಷ್ಣಪ್ಪ ಎಂ.ಟಿ. (ತುರುವೇಕೆರೆ)

ಅ) 2014–15ನೇ ಸಾಲಿನ ಲೆಕ್ಕಶೀರ್ಷಿಕೆ–3054 ಯೋಜನೆ ಹಾಗೂ ಯೋಜನೇತರ, ಲೆಕ್ಕಶೀರ್ಷಿಕೆ–5054 ಯೋಜನೆ ಹಾಗೂ ಯೋಜನೇತರಗಳಡಿಯಲ್ಲಿ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ಸರ್ಕಾರ ಬಿಡುಗಡೆ ಮಾಡಿದ ಹಣವೆಷ್ಟು (ಜಿಲ್ಲಾವಾರು, ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು);

ಆ) ವಿಧಾನ ಸಭಾ ಕ್ಷೇತ್ರವಾರು ಹಣ ಬಿಡುಗಡೆ ಮಾಡುವಾಗ ಕ್ಷೇತ್ರವಾರು ಹಂಚಿಕೆಯಲ್ಲಿ ಯಾವುದಾದರೂ ವ್ಯತ್ಯಾಸವಾಗಿದೆಯೇ;

ಇ) ಹಾಗಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು (ವಿವರವಾದ ಮಾಹಿತಿ ನೀಡುವುದು)?